

ನಾಡಿಗರಿಗೆ 'ಮುಖಾಮುಖಿ'ಯಾದ ಕಾಡು ಬೆಕ್ಕು



ದೂರ ದಿಗಂತ ಮತ್ತು ಹುಲ್ಲುಗಾವಲು ಕಲೆತುಹೋದಂತಿರುವ ಭಿತ್ತಿಯಲ್ಲಿ ಕೃಷ್ಣಮೃಗ ಯುಗಳ

# ತಾಲ್ ಛಾಪರ್

## ವನ್ಯಜೀವಿಗಳ ಬೆಚ್ಚನೆ ತವರು

■ ಡಿ.ಜಿ. ಮಲ್ಲಿಕಾರ್ಜುನ

ತಾಲ್ ಛಾಪರ್ ವನ್ಯಜೀವಿ ಅಭಯಾರಣ್ಯ ಥಾರ್ ಮರುಭೂಮಿಯ ಸೆರಗಿನಲ್ಲಿದೆ. ರಾಜಸ್ಥಾನದ ಚುರು ಜಿಲ್ಲೆಯ ಛಾಪರ್ ಪಟ್ಟಣಕ್ಕೆ ಹೊಂದಿಕೊಂಡಿರುವ 'ತಾಲ್ ಛಾಪರ್' ಪ್ರಸಿದ್ಧ ಶೇಖಾವತಿ ಪ್ರದೇಶದ ಭಾಗವಾಗಿದೆ. ತಾಲ್ ಛಾಪರ್‌ಗೆ ಮೇ 11, 1966ರಂದು ಅಭಯಾರಣ್ಯದ ಸ್ಥಾನಮಾನ ನೀಡಲಾಯಿತು. ಅದಕ್ಕೂ ಹಿಂದೆ ತಾಲ್ ಛಾಪರ್ ಬಿಕಾನೆರ್ ರಾಜಮನೆತನದ ಬೇಟೆಯಾಡುವ ಪ್ರದೇಶವಾಗಿತ್ತು.

ಸಮತಟ್ಟು ಮತ್ತು ತೆಳುವಾದ ತಗ್ಗು ಪ್ರದೇಶವನ್ನು ಈ ಅಭಯಾರಣ್ಯ ಹೊಂದಿದೆ. ವಿಶಾಲವಾದ ಹುಲ್ಲುಗಾವಲುಗಳು ಇರುವ ಈ ಸ್ಥಳ ನೋಡಲು ಬಲು ಸುಂದರ. ಭಾರತದಲ್ಲಿ ಕಂಡುಬರುವ ಅತ್ಯಂತ ಆಕರ್ಷಕವಾದ ಕೃಷ್ಣಮೃಗ (ಬ್ಲ್ಯಾಕ್‌ಬಕ್)ಗಳ ವಿಶಿಷ್ಟವಾದ ಆಶ್ರಯತಾಣವಿದು.

ರಾಜಸ್ಥಾನಿ ಭಾಷೆಯಲ್ಲಿ 'ತಾಲ್' ಪದದ ಅರ್ಥ ಸಮತಟ್ಟಾದ ಭೂಮಿ. ಮಳೆಯ ಸಮಯದಲ್ಲಿ



ಸ್ಟೆಪ್ಪೀ ಈಗಲ್: ಮುಗಿಲು ಅಳೆಯಲು ಮುನ್ನುಡಿ



